ಬದುರಾ ಮಾತಾಡಿದಂಗ ಹೆಂಗ ಆಗತ್ತ?'

ಆಗ ಅವರ ಹೆಂಡತಿ ನಡುವ ಬಾಯಿ ಹಾಕಿ 'ಟಿ.ವಿ.ಯೊಳಗ ನೋಡಿದಿವಿ. ಎಂಥಾ ಪುಣ್ಯೇದ ಕೆಲಸಾ ಮಾಡ್ತಾ ಅದೀರಿ. ನಿಮ್ಮ ಜತಿಲೆ ನಮ್ಮ ಜಗ್ಗುನೂ ಸೇರ್ಯಾನ... ಯಾಕೋ ಮೊನ್ನಿಯಿಂದ ಅವಗ ಫೋನ್ ಮಾಡ್ತಾ ಅದೀನಿ, ಎತ್ತತಾ ಇಲ್ಲ.'

'ಅಮ್ಮಾರ, ಅವರಪ್ಪಗ ಹುಷಾರಿರಲಿಲ್ಲ. ಅಲ್ಲದ ನೆರೆಹೊರೆಯವರಿಗೆ ಏನಾದ್ರೂ ಕೊರೊನಾ ಲಕ್ಷಣ ಕಂಡ್ರ ಆಸ್ಪತ್ರೆಗೆ ಅಡ್ಮಿಟ್ ಮಾಡಿಸ್ತಾನ. ಇಂಥ ಕೆಲಸದಾಗ ಬೀಜಿ ಆಗಿಬಿಟ್ವಾನ.'

'ನಮ್ಮಣ್ಣಗ ಹುಷಾರಿರಲ್ಲಾ? ಅವಗ ಶುಗರ್, ಬಿ.ಪಿ. ಎರಡೂ ಅದಾವು! ಹಾರ್ಟ್ ವೀಕ್ ಬ್ಯಾರೆ.'

'ಅದಕ್ಕೇ ಜಗದೀಶನೂ ಹೆದರಿಕೊಂಡಿದ್ದ. ಮೂರು ದಿನ ವೆಂಟಿಲೇಟರ್ ಮ್ಯಾಲೆ ಇಟ್ಟದ್ರು. ಸುರೇಶ ಡಾಕ್ಟರು ಅವರೊಂದಿಗೆ ವಿಶ್ವಾಸದಿಂದ ಮಾತಾಡಿಸ್ತಾ ಉಪಚರಿಸಿದರು. ಈಗ ಆರಾಮಾಗಿ ತಮ್ಮ ಮನಿಗೆ ಹೋಗ್ಯಾರ.'

'ನಿಮ್ಮ ಮಾತು ಕೇಳಿ ಸಮಾಧಾನ ಆತು ನೋಡ್ರೀ.'

'ಬರ್ತೀನಿ. ನಿಮ್ಮ ಗೆಳೆಯ ಚಂದ್ರಶೇಖರ ಅವರ ಮನಿಗೆ ಹೋಗಿ ದವಾಖಾನಿಗೆ ಹೋಗಬೇಕು.'

ಗಣೇಶನ ದಾರೀ ಕಾಯ್ತಾ ಬಾಗಲ ಬಳಿ ನಿಂತಿದ್ದಳು ಚಂದ್ರಶೇಖರ ಅವರ ಮಗಳು ಶುಭಾ. ಒಳಗಿಂದ ಸಣ್ಣಾಗಿ ನರಳುವ ದನಿ ಕೇಳ್ತಾ ಇತ್ತು. ಇಬ್ಬರೂ ಅಂತರದಲ್ಲೇ ನಿಂತು ಮಾತಾಡತೊಡಗಿದರು.

'ನಿಮಗ ಅಪ್ಪಾನ ಸ್ಥಿತಿ ಬಗ್ಗೆ ಹೇಳತೀನಿ. ಕೊರೊನಾ ಟ್ರೀಟ್ಮೆಂಟ್‌ಗೆ ಒಂದು ದೊಡ್ಡ ಖಾಸಗಿ ಆಸ್ಪತ್ರೆಗೆ ಅಡ್ಮಿಟ್ ಮಾಡಿದೆ. ಗುಣವಾಯಿತು ಅನ್ನೋ ಹೊತ್ತಿಗೆ ಫಂಗಸ್ ಆಗಿಬಿಟ್ಟಿತು. ತೀವ್ರ ನಿಗಾ ಘಟಕದಲ್ಲಿಟ್ಟು ದುಡ್ಡು ತುಂಬಿಸಿಕೊಳ್ತಾ ಹೋದರು. ಮೂವತ್ತು ಲಕ್ಷ ಖರ್ಚಾಯ್ತು. ಫಂಗಸ್ ಟ್ಯಾಬ್ಲೆಟ್ ದುಬಾರಿ ಅಂತ ಹೇಳತಾ ಬಿಲ್ ವಿಪರೀತ ಮಾಡಿದರು. ಸ್ವಲ್ಪ ಗುಣಾ ಆಯ್ತು. ಅಪ್ಪ, ಮನಿಗೆ ಕರಕೊಂಡು ನಡೀರಿ. ಸಾಯೂದಾದ್ರ ಮನಿಯಾಗs ಸಾಯ್ತೀನಿ, ಇಲ್ಲಿ ಒಲ್ಲೆ ಅಂತ ಹಟ ಹಿಡಿದರು. ಕರಕೊಂಡು ಬಂದ್ವಿ. ಈಗ ಮತ್ತೆ ಜ್ವರ, ಕೆಮ್ಮು, ಎದಿನೋವು, ಮುಖ ಬಾವು, ಉಸಿರಾಟ ತೊಂದರೆ. ಏನು ಮಾಡಬೇಕು ತೋಚತಾ ಇಲ್ಲ. ನಮ್ಮ ಏರಿಯಾದಾಗ ಲಾಕ್‌ಡೌನ್ ಬ್ಯಾರೆ.'

'ನಾನು ಒಬ್ಬ ಸಾಮಾನ್ಯ ಕೊರೊನಾ ಸೈನಿಕ ಮೇಡಂ, ನಾ ಬಲ್ಲವನಲ್ಲ. ಆದ್ರ ನನಗ ತಿಳಿದ ಮಟ್ಟಿಗೆ ಸರಕಾರಿ ಆಸ್ಪತ್ರೆಯ ಡಾಕ್ಟರ್ ಸುರೇಶರಿಗೆ ತೋರಿಸಬಹುದು. ಅವರು ಬಹಳ ಚೊಲೊ ಡಾಕ್ಟರ್. ತಮ್ಮ ಶಕ್ತಿ ಮೀರಿ ಪ್ರಯತ್ನಿಸ್ತಾರ.'

'ಆಗಲಿ. ನಿಮ್ಮ ಸಹಾಯ ಬೇಕು.'

'ಸಹಾಯ ಅಂತ ಅನಬ್ಯಾಡ್ರಿ. ನಾವು ಕೊರೊನಾ ಸೈನಿಕರಾಗಿ ಕೆಲಸ ಮಾಡತಿದ್ದೀವಿ. ನಮ್ಮ ಕರ್ತವ್ಯ. ನಾವು ಈ ಕಾಲದಾಗ ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡತಿದ್ದಕ್ಕ ಡಾಕ್ಟರ್ ನಮ್ಮ ಮ್ಯಾಲೆ ವಿಶ್ವಾಸ ಇಟ್ಟಾರ ಅಷ್ಟೇ.'

ಗಣೇಶ ಇಷ್ಟೆಲ್ಲಾ ಮಾತಾಡಿ ಹೋದ ಮ್ಯಾಲೆ ಚಂದ್ರಶೇಖರವರ ಮನಿಗೆ ಅಂಬ್ಯುಲೆನ್ಸ್ ಬಂತು. ಅವರ ಮಗಳು ಶುಭಾ ಹಳೆಯ ರಿಪೋರ್ಟ್‌ಗಳನ್ನೆಲ್ಲ ಡಾಕ್ಟರ್‌ಗೆ ತೋರಿಸಿ ತನ್ನಪ್ಪನನ್ನ ಉಳಿಸಿಕೊಡಬೇಕಂತ ಯಾಚಿಸಿದಳು. 'ಪ್ರಯತ್ನ ಮಾಡೋಣಮ್ಮ' ಅಂತ ಹೇಳಿ ಅವರನ್ನ ಡಾಕ್ಟರ್ ಅಡ್ಮಿಟ್ ಮಾಡಿಕೊಂಡರು. ಎರಡು ದಿನ ಬೇರೆ ಬೇರೆ ಪರೀಕ್ಷೆ ನಡೆಸಿ ಡಾಕ್ಟರ್ ಪುಪ್ಪುಸದಲ್ಲಿ ಸೋಂಕು ಆಗಿ ಸಣ್ಣ ಗಡ್ಡೆಯಿದ್ದು, ಅದರ ಆಪರೇಷನ್ ಮಾಡಬೇಕಾದ ಅನಿವಾರ್ಯತೆ ಇದೆ ಅಂದಾಗ ಶುಭಾ ತತ್ತರಿಸಿದಳು. ಗಲಿಬಿಲಿಗೊಂಡು ಕಡೀಕ ಒಪ್ಪಿಕೊಳ್ಳಬೇಕಾತು. ಅವ್ವನಿಗೆ ಅಪ್ಪನ ಗಂಭೀರ ಸ್ಥಿತಿಯ ಬಗ್ಗೆ ಮಾತಾಡುವಂತಿಲ್ಲ. ಆಕೆ ಆಸ್ಪತ್ರೆಗೆ ಬರುವಂತಿಲ್ಲ. ಶುಭಾ ಒಬ್ಬಳೇ ಚಡಪಡಿಸ್ತಾ ನಿಂತಿದ್ದಾಳೆ. ಆದರೂ ಏನೂ ಸಂಬಂಧ ಇರದ ಗಣೇಶ ಸಂಬಂಧಿಕನಾಗಿ ಜೊತೆಗೇ ನಿಂತು ಧೈರ್ಯದ ಮಾತು ಆಡತಿದ್ದಾನೆ. ಆಪರೇಷನ್ ಥಿಯೇಟರದಲ್ಲಿ ಅಪ್ಪನ ಆಪರೇಷನ್ ನಡೀತಾ ಇರುವಾಗ ಮಗಳು ಎದಿಗುದಿಯಲ್ಲಿದ್ದು ಒಳಗೊಳಗೇ ದೇವರಲ್ಲಿ ಮೊರೆ ಇಡತಿದ್ದಾಳೆ.

ಡಾಕ್ಟರ್‌ಹೊರಬಂದುಆಪರೇಷನ್‌ಯಶಸ್ವಿಯಾಗಿದೆ ಅಂದಾಗ ಆಕೆ ನಿರುಮ್ಮಳಗೊಂಡು ಉಸಿರು ಹಾಕಿದಳು. ಮುಂದೆ ಐದು ದಿನ ಆಸ್ಪತ್ರೆಯಲ್ಲಿದ್ದು ಚಂದ್ರಶೇಖರ ಗುಣಮುಖರಾಗಿ ಮನಿಗೆ ಹೊರಡುವಾಗ ಡಾಕ್ಟರ್ ಇನ್ನೂ ಕಾಳಜಿ ವಹಿಸುವ ಬಗ್ಗೆ ಹೇಳಿದರು. ಡಿಸ್ಚಾರ್ಜ್ ಆಗುವಾಗಲೂ ಗಣೇಶ ಅಲ್ಲಿದ್ದ. ಚಂದ್ರಶೇಖರ ಮತ್ತು ಅವರ ಮಗಳು ಶುಭಾ ಡಾಕ್ಟರ್‌ಗೆ